ದಿನಾಂಕ: **02.06.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ನೀಡಲಾಯಿತು.

ಮುಂದುವರೆದ ಪಾಟೀ ಸವಾಲು ವಾದಿ ಪರ ಶ್ರೀ ಕೆ ಎಂ ಎಂ ವಕೀಲರಿಂದಃ-

ಆಸ್ತಿ ವಿಚಾರದಲ್ಲಿ ನನಗೂ ಮತ್ತು ವಾದಿಗೂ ಯಾವುದೇ ತಕರಾರು ಇಲ್ಲ. ದಾವಾ ಸ್ವತ್ತಿನಲ್ಲಿ ನನಗೆ ಯಾವುದೇ ಹಕ್ಕು ಸ್ವಾಧೀನ ಇಲ್ಲ ಎಂದರೆ ಸರಿ. ನನಗೂ ಹಾಗೂ ವಾದಿಯ ನಡುವೆ ಈಗಲೂ ವಿಶ್ವಾಸ ಇರುತ್ತದೆ. ನಾನು ತಕರಾರು ಸಲ್ಲಿಸಿರುವುದಿಲ್ಲ. ವಾದಿ ಯಾವ ಹೌಸ್ ಲಿಸ್ಟ್ ನಂಬರ್, ವಿಸ್ತೀರ್ಣ, ಚಕ್ಕುಬಂದಿಗೆ ಸಂಬಂಧಿಸಿದಂತೆ ದಾವೆಯನ್ನು ಸಲ್ಲಿಸಿರುತ್ತಾರೆ ಎಂಬುದು ನನಗೆ ಗೊತ್ತಿಲ್ಲ. ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ನಾನು ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ನಾನು ಗ್ರಾಮ ಪಂಚಾಯತಿಯ ಸದಸ್ಯರಾಗಿಯಾಗಲೀ ಅಥವಾ ಪಂಚಾಯತಿಯಲ್ಲಿ ಕೆಲಸವಾಗಲೀ ಮಾಡಿಲ್ಲ ಎಂದರೆ ಸರಿ. ವಾದಿ ಮತ್ತು 1 ರಿಂದ 3 ನೇ ಪ್ರತಿವಾದಿಗಳ ನಡುವೆ ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ತಕರಾರು ಇರುತ್ತದೆ ಎಂದರೆ ಸರಿ. ವಾದಿಯು ಪಂಚಾಯತಿಗೆ, ಇ.ಓ. ಅಧಿಕಾರಿಗಳಿಗೆ ಮತ್ತು ಜಿಲ್ಲಾ ಪಂಚಾಯತಿಯ ಸಿ.ಇ.ಓ. ರವರಿಗೆ ಅರ್ಜಿಯನ್ನು ನೀಡಿದ್ದರು ಎಂದರೆ ಸರಿ. ಅದೇ ರೀತಿ ಸ್ಥಳಕ್ಕೆ ಎಲ್ಲಾ ಅಧಿಕಾರಿಗಳು ಭೇಟಿ ನೀಡಿದ್ದರು ಎಂದರೆ ಸರಿ. ದಾವಾ ಸ್ವತ್ತಿನ ಖಾತೆಗಳು ಈಗಲೂ ಸಹ ವಾದಿಯ ಹೆಸರಿನಲ್ಲಿ ಇವೆ ಎಂದರೆ ಗೊತ್ತಿಲ್ಲ. ದಾವಾ ಸ್ವತ್ತು ಖಾಲಿ ಜಾಗ ಆಗಿರುತ್ತದೆ. ವಾದಿಯ ಹೆಸರಿನಲ್ಲಿ ಎಷ್ಟು ವರ್ಷಗಳಿಂದ ದಾಖಲೆಗಳು ಬರುತ್ತಿವೆ ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿ ಬೇರೆಯವರ ಹೆಸರಿಗೆ ಆಗಿರುವ ಬಗ್ಗೆ ಮಾಹಿತಿ ಇಲ್ಲ. ವಾದಿಯು ಪ್ರತಿವಾದಿ 1 ರಿಂದ ಮತ್ತು ನನ್ನ ವಿರುದ್ಧ ದೂರನ್ನು ಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ಈ ದಾವೆಯಲ್ಲಿ ವಾದಿ ಏನೆಲ್ಲಾ ದಾಖಲೆಗಳನ್ನು ಹಾಜರುಪಡಿಸಿದ್ದಾರೆ ಎಂಬುವುದನ್ನು ನಾನು ತಿಳಿದುಕೊಂಡಿಲ್ಲ.

**ಮರು ವಿಚಾರಣೆ ಇರುವುದಿಲ್ಲ.**

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

ಓ. ಹೇ. ಕೇ. ಸರಿ ಇದೆ.
ಸಹಿ/-

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಶಿಡ್ಲಘಟ್ಟ.